ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
Karnataka School Quality Assessment & Accreditation Council
ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03. ದೂರವಾಣಿ ಸಂಖ್ಯೆ: 23341615, 23562283, 29720300
e-mail: ksqaacbangalore@gmail.com & ksqaacbengaluru@gmail.com

ಸಂಖ್ಯೆ: K1/KSQAAC/5 ಮತ್ತು 8ನೇ ಮೌ/05/2022–23 ದಿನಾಂಕ: 31.03.2023

# ಜ್ಞಾಪನ

**ವಿಷಯ:–** 2022–23ನೇ ಸಾಲಿನ 5 ಮತ್ತು 8ನೇ ತರಗತಿ ಮೌಲ್ಯಾಂಕನದ ಮೌಲ್ಯಮಾಪನ ಕಾರ್ಯಕ್ಕಾಗಿ ಬಿ.ಇ.ಓ ಲಾಗಿನ್ ಮೂಲಕ ಲಭ್ಯಮಾಡಲಾಗುವ ಕೀ ಉತ್ತರಗಳನ್ನು ಮುದ್ರಣ ಮಾಡಿಕೊಂಡು ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುವ ಬಗ್ಗೆ.

**ಉಲ್ಲೇಖ:–**
1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಕಛೇರಿ ಸುತ್ತೋಲೆ ಸಂಖ್ಯೆ: E-870867-DPII-PIOC7-2(PLM)/3/2022, ದಿನಾಂಕ: 12.12.2022
2. ಈ ಕಛೇರಿ ಮಾರ್ಗಸೂಚಿ ಸಂಖ್ಯೆ: K1/KSQAAC/5 ಮತ್ತು 8ನೇ ವಾ.ಪ/05/2022–23, ದಿನಾಂಕ: 27.02.2023
3. ಈ ಕಛೇರಿ ಪರಿಷ್ಕೃತ ಮಾರ್ಗಸೂಚಿ ಸಂಖ್ಯೆ: K1/KSQAAC/5 ಮತ್ತು 8ನೇ.ಮೌ/05/ 2022–23, ದಿನಾಂಕ: 18.03.2023
4. ಈ ಕಛೇರಿ ಜ್ಞಾಪನ ಸಮಸಂಖ್ಯೆ ದಿನಾಂಕ: 30.03.2023
5. ಈ ಕಛೇರಿ ಜ್ಞಾಪನ ಸಂಖ್ಯೆ: K1/KSQAAC/5 ಮತ್ತು 8ನೇ ಮೌ/05/2022–23, ದಿನಾಂಕ: 28.03.2023

~*~*~*~

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2022–23ನೇ ಸಾಲಿನ 5 ಮತ್ತು 8ನೇ ತರಗತಿ ಮೌಲ್ಯಾಂಕನದ ಮೌಲ್ಯಮಾಪನ ಕಾರ್ಯಕ್ಕಾಗಿ ಉಲ್ಲೇಖ (4) ರಲ್ಲಿ 5ನೇ ತರಗತಿಯ ಕೀ ಉತ್ತರಗಳನ್ನು ಬಿ.ಇ.ಓ ಲಾಗಿನ್ ನಲ್ಲಿ ಲಭ್ಯಮಾಡಲಾಗಿದೆ. ಪ್ರಸ್ತುತ 8ನೇ ತರಗತಿಯ ಎಲ್ಲಾ ಭಾಷಾ ವಿಷಯಗಳ (ಪ್ರಥಮ, ದ್ವಿತೀಯ ಮತ್ತು ತೃತೀಯ) ಕೀ ಉತ್ತರಗಳನ್ನು ಲಭ್ಯಮಾಡಲಾಗಿದ್ದು, ಸದರಿ ಕೀ ಉತ್ತರಗಳನ್ನು ಮೌಲ್ಯಮಾಪಕರ ಸಂಖ್ಯೆಗೆ ಅನುಗುಣವಾಗಿ ತಲಾ ಒಂದು ಪ್ರತಿಯಂತೆ ತರಗತಿವಾರು, ಮಾಧ್ಯಮವಾರು, ವಿಷಯವಾರು ಮುದ್ರಿಸಿಕೊಂಡು ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸಲು ಈ ಮೂಲಕ ತಿಳಿಸಿದೆ. ಕೋರ್ ವಿಷಯಗಳ ಕೀ ಉತ್ತರಗಳನ್ನು ದಿನಾಂಕ: 01.04.2023 ರ ಮೌಲ್ಯಾಂಕನದ ನಂತರ ಲಭ್ಯಮಾಡಲಾಗುವುದು.

ಮುಂದುವರೆದು, ಮೌಲ್ಯಮಾಪನ ಕಾರ್ಯಕ್ಕಾಗಿ ಉಲೇಖ (5) ರಲ್ಲಿ ಮೌಲ್ಯಮಾಪಕರ ಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ನಿಯಮಾನುಸಾರ ಖರ್ಚು ಭರಿಸಿ, ಮೌಲ್ಯಮಾಪನ ಕಾರ್ಯವನ್ನು ಯಾವುದೇ ಗೊಂದಲಗಳಿಲ್ಲದಂತೆ ನಿರ್ವಹಿಸಲು ತಿಳಿಸಿದೆ.

31/3/2023

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯು.ಎ.ಎ.ಸಿ

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:–**
1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ.
2. ಮೌಲ್ಯಮಾಪನ ಕಾರ್ಯಕ್ಕಾಗಿ ನಿಯೋಜಿಸಲಾಗಿರುವ ಡಯಟ್‌ನ ಎಲ್ಲಾ ಅಧಿಕಾರಿಗಳಿಗೆ.
3. ರಾಜ್ಯದ ಎಲ್ಲಾ 5 ಮತ್ತು 8ನೇ ತರಗತಿ ಮೌಲ್ಯಾಂಕನದ ಜಿಲ್ಲಾ ಮತ್ತು ತಾಲ್ಲೂಕು ನೋಡಲ್ ಅಧಿಕಾರಿಗಳಿಗೆ.
4. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳಿಗೆ.
5. ಕಛೇರಿ ಪ್ರತಿ.

ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
Karnataka School Quality Assessment & Accreditation Council
ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03. ದೂರವಾಣಿ ಸಂಖ್ಯೆ: 23341615, 23562283, 29720300
ಫ್ಯಾಕ್ಸ್: 080-23347670, e-mail: ksqaacbangalore@gmail.com & ksqaacbengaluru@gmail.com


ಸಂಖ್ಯೆ: K1/KSQAAC/5 ಮತ್ತು 8ನೇ ಮೌ/05/2022-23 ದಿನಾಂಕ: 30.03.2023

## ಜ್ಞಾಪನ

**ವಿಷಯ:-** 2022-23ನೇ ಸಾಲಿನ 5 ಮತ್ತು 8ನೇ ತರಗತಿ ಮೌಲ್ಯಾಂಕನದ ಮೌಲ್ಯಮಾಪನ ಕಾರ್ಯಕ್ಕಾಗಿ ಬಿ.ಇ.ಓ ಲಾಗಿನ್ ಮೂಲಕ ಲಭ್ಯಮಾಡಲಾಗುವ ಕೀ ಉತ್ತರಗಳನ್ನು ಮುದ್ರಣ ಮಾಡಿಕೊಂಡು ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುವ ಬಗ್ಗೆ.

**ಉಲ್ಲೇಖ:-**
1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಕಛೇರಿ ಸುತ್ತೋಲೆ ಸಂಖ್ಯೆ: E-870867-DPII-PIOC7-2(PLM)/3/2022, ದಿನಾಂಕ: 12.12.2022
2. ಈ ಕಛೇರಿ ಮಾರ್ಗಸೂಚಿ ಸಂಖ್ಯೆ: K1/KSQAAC/5 ಮತ್ತು 8ನೇ ವಾ.ಪ/05/2022-23, ದಿನಾಂಕ: 27.02.2023
3. ಈ ಕಛೇರಿ ಪರಿಷ್ಕೃತ ಮಾರ್ಗಸೂಚಿ ಸಂಖ್ಯೆ: K1/KSQAAC/5 ಮತ್ತು 8ನೇ.ಮೌ/05/ 2022-23, ದಿನಾಂಕ: 18.03.2023

~*~*~*~

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2022-23ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ 5 ನೇ ತರಗತಿ ವಿದ್ಯಾರ್ಥಿಗಳಿಗೆ **ದಿನಾಂಕ: 27.03.2023 ರಿಂದ 30.03.2023 ರವರೆಗೆ** ಮತ್ತು 8 ನೇ ತರಗತಿ ವಿದ್ಯಾರ್ಥಿಗಳಿಗೆ **ದಿನಾಂಕ: 27.03.2023 ರಿಂದ 01.04.2023 ರವರೆಗೆ** ಮೌಲ್ಯಾಂಕನವನ್ನು ನಡೆಸಲಾಗುತ್ತಿದೆ. ಸದರಿ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಕಾರ್ಯವನ್ನು ಉಲ್ಲೇಖ (3) ರಲ್ಲಿ ತಿಳಿಸಿರುವಂತೆ ಆಯಾ ಬ್ಲಾಕ್ ಹಂತದಲ್ಲಿ ಅಂತರ್ ಕ್ಲಸ್ಟರ್‌ವಾರು (Inter cluster) ನಿರ್ವಹಿಸುವುದು.

ಮೌಲ್ಯಮಾಪನ ಕಾರ್ಯಕ್ಕೆ ಅಗತ್ಯವಿರುವ ತರಗತಿವಾರು, ಮಾಧ್ಯಮವಾರು, ವಿಷಯವಾರು ಅಗತ್ಯವಿರುವ ಕೀ ಉತ್ತರಗಳನ್ನು ಬಿ.ಇ.ಓ ಲಾಗಿನ್ ನಲ್ಲಿ ಲಭ್ಯಮಾಡಲಾಗಿದೆ. ಪ್ರಸ್ತುತ 5ನೇ ತರಗತಿಯ ಎಲ್ಲಾ 4 ವಿಷಯಗಳ ಕೀ ಉತ್ತರಗಳನ್ನು ಲಭ್ಯಮಾಡಲಾಗುತ್ತಿದ್ದು, 8ನೇ ತರಗತಿಯ ಕೀ ಉತ್ತರಗಳನ್ನು ದಿನಾಂಕ: 01.04.2023 ರ ಮೌಲ್ಯಾಂಕನದ ನಂತರ ಲಭ್ಯಮಾಡಲಾಗುವುದು. ಸದರಿ ಕೀ ಉತ್ತರಗಳನ್ನು ಮೌಲ್ಯಮಾಪಕರ ಸಂಖ್ಯೆಗೆ ಅನುಗುಣವಾಗಿ ತಲಾ ಒಂದು ಪ್ರತಿಯಂತೆ ತರಗತಿವಾರು, ಮಾಧ್ಯಮವಾರು, ವಿಷಯವಾರು ಮುದ್ರಿಸಿಕೊಳ್ಳುವುದು.

ಮೌಲ್ಯಮಾಪನ ಕಾರ್ಯಕ್ಕಾಗಿ ಮೌಲ್ಯಮಾಪಕರ ಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ನಿಯಮಾನುಸಾರ ಖರ್ಚು ಭರಿಸಿ, ಮೌಲ್ಯಮಾಪನ ಕಾರ್ಯವನ್ನು ಯಾವುದೇ ಗೊಂದಲಗಳಿಲ್ಲದಂತೆ ನಿರ್ವಹಿಸಲು ಈ ಮೂಲಕ ತಿಳಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯು.ಎ.ಎ.ಸಿ

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:-**
1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ.
2. ಮೌಲ್ಯಮಾಪನ ಕಾರ್ಯಕ್ಕಾಗಿ ನಿಯೋಜಿಸಲಾಗಿರುವ ಡಯಟ್‌ನ ಎಲ್ಲಾ ಅಧಿಕಾರಿಗಳಿಗೆ.
3. ರಾಜ್ಯದ ಎಲ್ಲಾ 5 ಮತ್ತು 8ನೇ ತರಗತಿ ಮೌಲ್ಯಾಂಕನದ ಜಿಲ್ಲಾ ಮತ್ತು ತಾಲ್ಲೂಕು ನೋಡಲ್ ಅಧಿಕಾರಿಗಳಿಗೆ.
4. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳಿಗೆ.
5. ಕಛೇರಿ ಪ್ರತಿ.